ಅ) ಇಂಡಿ ಮತ್ತು ಸಿಂದಗಿ ತಾಲ್ಲೂಕುಗಳಲ್ಲಿ ಜಾನುವಾರುಗಳು ಮತ್ತು ಕುರಿಗಳು ಹೆಚ್ಚಿಗೆ ಇರುವುದರಿಂದ ಇಂಡಿ ತಾಲ್ಲೂಕಿಗೆ ಕೋಡ್ ಎಕ್ಸ್-ರೇ ಯುನಿಟ್ ಅನ್ನು ಸ್ಥಾಪಿಸಲಾಗುವುದೇ?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಜಾನುವಾರುಗಳ ಸಂಖ್ಯೆ ಆಧಾರದ ಮೇಲೆ ವಂಟನದ ಲಭ್ಯತೆಯ ಮೇರೆಗೆ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ಆ) ಪ್ರತಿ ಜಿಲ್ಲೆಯಲ್ಲಿ ಒಂದು 'ಪಾಲಿಕ್ಲಿನಿಕ್' ಗಳನ್ನು ಪ್ರಾರಂಭಿಸುವ ಕಾರ್ಯಕ್ರಮವಿದ್ದು ಈ ಪಾಲಿಕ್ಲಿನಿಕ್ಗಳನ್ನು ಸ್ಥಾಪಿಸುವ ಸಮಯದಲ್ಲಿ ಕ್ಷ-ಕಿರಣ ಯಂತ್ರಗಳನ್ನು ಅಳವಡಿಸಲು ಪರಿಗಣಿಸಲಾಗುವುದು.

ವಾಣಿಜ್ಯ ತೆರಿಗೆ ಸಂಗ್ರಹ

2626 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1939-94, 1994-95 ಹಾಗೂ 1995-96ನೇ ಆರ್ಥಿಕ ವರ್ಷದಲ್ಲಿ ವಾರ್ಷಿಕ ವಾಣಿಜ್ಯ ತೆರಿಗೆ ಸಂಗ್ರಹ ಎಷ್ಟು? (ಮೂರು ವರ್ಷಗಳ ಪ್ರತ್ಯೇಕ ವಿವರ ನೀಡುವುದು);

ಆ) ಈ ಮೂರು ವರ್ಷಗಳಲ್ಲಿ ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಆಗಿರತಕ್ಕ ಏರುಪೇರುಗಳಿಗೆ ಕಾರಣಗಳೇನು? (ವಿವರ ನೀಡುವುದು).

ಇ) 1996-97ನೇ ಸಾಲಿಗೆ ವಾಣಿಜ್ಯ ತೆರಿಗೆ ಸಂಗ್ರಹಕ್ಕೆ ನಿಗಧಿಪಡಿಸಿದ ಗುರಿ ಎಷ್ಟು?

ಶ್ರೀ ಸಿದ್ಧರಾಮಯ್ಯ (ಉಪಮುಖ್ಯ ಮಂತ್ರಿಗಳು) :

ಅ) 1993-941994-95 1995-96

(ರೂ.ಕೋಟಿಗಳಲ್ಲಿ)

2577.58 2809.51 3503.39

ಆ) 1) 27.9.94 ರಿಂದ ಸ್ಲ್ಯಾಬ್ ಪದ್ಧತಿ ಜಾರಿಗೆ ತಂದಿದ್ದರಿಂದ ಮನರಂಜನಾ ತೆರಿಗೆಯಲ್ಲಿ ಇಳಿಮುಖವಾಗಿದೆ.

2) 1994-95ರಲ್ಲಿ ಪ್ರವೇಶ ತೆರಿಗೆ ಅಧಿನಿಯಮದಡಿಯಲ್ಲಿ ಕೆಲವು ಸರಕುಗಳಿಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಿದ್ದರಿಂದ ತೆರಿಗೆ ಸಂಗ್ರಹಣೆಯಲ್ಲಿ ಇಳಿಮುಖವಾಗಿದೆ.

3) 1995-96ರಲ್ಲಿ ಕಾಫಿ ಬೆಲೆ ಏರಿದ್ದರಿಂದ ಕೃಷಿ ವರಮಾನ ತೆರಿಗೆಯಲ್ಲಿ ಹೆಚ್ಚಳ ಆಗಿದೆ.

ಇ) ರೂ. 4221.42 ಕೋಟಿಗಳು

ಉಡುಪಿಗೆ ಜಾನುವಾರು ಆಸ್ಪತ್ರೆ ಮಂಜುರಾತಿ ಕುರಿತು

2627 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?